

## ಸೈನಾ- ಸಿಂಧು ಎಂಬ ಮಿಂಚು

ಹೋದ ಬಾರಿ ಕಂಚಿನ ಪದಕ ಜಯಿಸಿದ್ದ ಸೈನಾ ನೆಹ್ವಾಲ್ ಈ ಬಾರಿ ತುಂಬು ಆತ್ಮವಿಶ್ವಾಸದಲ್ಲಿದ್ದಾರೆ. ಹಿಮ್ಮಡಿ ಗಾಯದಿಂದ ಹೆಚ್ಚು ಕಾಲ ಬಳಲಿದ ಅವರು ಅಗ್ರಶ್ರೇಯಾಂಕವನ್ನೂ ಕಳೆದುಕೊಂಡಿದ್ದರು. ಆದರೆ ಕೆಲವು ದಿನಗಳ ಹಿಂದಷ್ಟೆ ಆಸ್ಟ್ರೇಲಿಯಾ ಓಪನ್ ಸಿಂಗಲ್ಸ್ ಕಿರೀಟ ಧರಿಸುವ ಮೂಲಕ ರಿಯೊ ಹಣಾಹಣಿಗೆ ತಾವು ಸಿದ್ಧ ಎಂಬ ಸಂದೇಶ ರವಾನಿಸಿದ್ದಾರೆ.

2015ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ, ವುಹಾನ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕಗಳು ಅವರಿಗೆ ಒಲಿದಿದ್ದವು. ಥಾಯ್ಲೆಂಡ್‌ನ ರಚನಾಕ್ ಇಂಟನಾನ್ ಅವರು ಸೈನಾಗೆ ಪ್ರಮುಖ ಸ್ಪರ್ಧಿಯಾಗುವ ನಿರೀಕ್ಷೆ ಇದೆ.

ಎರಡು ವಿಶ್ವ ಚಾಂಪಿಯನ್‌ಷಿಪ್ ಗಳಲ್ಲಿ ಕಂಚಿನ ಪದಕಗಳ ವಿಜೇತೆ ಹೈದರಾಬಾದಿನ ಪಿ.ವಿ. ಸಿಂಧು ಕೂಡ ಪದಕ ಗೆಲ್ಲುವ ಭರವಸೆ ಮೂಡಿಸಿರುವ ಆಟಗಾರ್ತಿ. ಇತ್ತೀಚೆಗ ಸ್ಯಾಫ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗಳಿಸಿದ್ದರು.

ಸೈನಾ ನೆಹ್ವಾಲ್

ಚಿತ್ರ: ಕೆ.ಎನ್.ಶಾಂತಕುಮಾರ್

ಸಿಂಗ್, ಗುರುಮೀತ್ ಸಿಂಗ್, ಇರ್ಫಾನ್ ಕೊಲುತಮ್ ಥೋಡಿ (20 ಕಿಮೀ ನಡಿಗೆ), ಸಂದೀಪ್ ಕುಮಾರ್, ಮನೀಶ್ ಸಿಂಗ್ (50 ಕಿ.ಮೀ) ಅವರ ಹಾದಿಯೂ ಕಠಿಣವಾಗಿದೆ. ಜಮೈಕಾ, ಅಮೆರಿಕ, ಚೀನಾ, ಕೆನ್ಯಾ, ಇಥಿಯೋಪಿಯಾದ ಸ್ಪರ್ಧಿಗಳನ್ನು ಹಿಂದಿಕ್ಕಿದರೆ ಮಾತ್ರ ಪದಕ ಒಲಿಯಲಿದೆ.

ಈ ಬಾರಿ ಪುರುಷರ 4X400 ಮೀಟರ್ಸ್ ರಿಲೆ ತಂಡವು (ಮಹಮ್ಮದ ಅನಾಸ್, ಅಯ್ಯಸ್ವಾಮಿ ದರುಣ್, ಮೋಹನ್ ಕುಮಾರ್, ಸುಮಿತ್ ಕುಮಾರ್, ಮಹಮ್ಮದ್ ಕುಂಞ, ಆರೋಗ್ಯರಾಜು) ಅರ್ಹತೆ ಪಡೆದಿದೆ.

### ಶ್ರೀಕಾಂತ್: ನಿರೀಕ್ಷೆಯ ಭಾರ

ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಈ ಬಾರಿ ಕಿದಂಬಿ ಶ್ರೀಕಾಂತ್ ಒಬ್ಬರೇ ಭಾರತದ ಭರವಸೆಯಾಗಿದ್ದಾರೆ.

ಲಂಡನ್ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿ ದಾಖಲೆ ಬರೆದಿದ್ದ ಪರುಪಳ್ಳಿ ಕಶ್ಯಪ್ ರಿಯೊಗೆ ಅರ್ಹತೆ ಪಡೆದಿಲ್ಲ.

ಆದ್ದರಿಂದ ಗುಂಟೂರು ಹುಡುಗ ಶ್ರೀಕಾಂತ್ ಅವರೊಬ್ಬರೇ ಸ್ಪರ್ಧಿಸಲಿದ್ದಾರೆ. ಬಿಡಬ್ಲ್ಯುಎಫ್ ಶ್ರೇಯಾಂಕದಲ್ಲಿ 11ನೇ ಸ್ಥಾನದಲ್ಲಿರುವ ಶ್ರೀಕಾಂತ್ ಅವರಿಗೆ ಇದು ಮೊದಲ ಒಲಿಂಪಿಕ್ಸ್. ಈ ಹಿಂದಿನ ಕೆಲವು ಟೂರ್ನಿಗಳಲ್ಲಿ ಚೀನಾ, ಥಾಯ್ಲೆಂಡ್, ಕೊರಿಯಾ, ಸಿಂಗಪುರದ ಅಗ್ರಶ್ರೇಯಾಂಕದ ಆಟಗಾರರಿಗೆ ನೀರು ಕುಡಿಸಿರುವ 23 ವರ್ಷದ ಶ್ರೀಕಾಂತ್ ಸಿಡಿಸುವ ಸ್ಮ್ಯಾಷ್‌ಗೆ ರಿಯೊದಲ್ಲಿ ಪದಕ ಒಲಿಯುವುದೇ ಕಾದು ನೋಡಬೇಕು.

ಪುರುಷರ ಡಬಲ್ಸ್‌ನಲ್ಲಿ ಭರವಸೆಯ ಜೋಡಿ ಮನು ಅತ್ರಿ ಮತ್ತು ಬಿ ಸುಮಿತ್ ರೆಡ್ಡಿ ಕಣಕ್ಕೆ ಇಳಿಯಲಿದ್ದಾರೆ. ಅವರಿಗೆ ಅದೃಷ್ಟ ಜೊತೆಗೂಡುವುದೇ?

### ಅಶ್ವಿನಿ - ಜ್ವಾಲಾ ರಂಗು ತರುವರೆ?

ಇತ್ತೀಚೆಗೆ ಊಬರ್ ಕಪ್ ಟೂರ್ನಿಯಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಜ್ವಾಲಾ ಗುಟ್ಟಾ ಅವರ ಜೋಡಿಯು ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿತ್ತು. ಸ್ಯಾಫ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು.

ಆದರೆ ಇದೆಲ್ಲಕ್ಕಿಂತಲೂ ಈ ಜೋಡಿಯು ಸುದ್ದಿಯಲ್ಲಿದ್ದದ್ದು ಮಾತ್ರ ತಮ್ಮ